ಅಧ್ಯಕ್ಷರು: ಆಮೇಲೆ ಮಾತನಾಡೋಣ ಸಾರ್. ಈಗ ಆರಂಭವಾಗಲಿ.

ಶ್ರೀ ಎನ್. ಧರ್ಮಸಿಂಗ್: Last Saturday ನಾವು ಕುಳಿತುಕೊಳ್ಳಲಿಲ್ಲವೇ? Council ನಲ್ಲಿ .....

ಶ್ರೀ ಬಿ.ಎಸ್. ಯಡಿಯೂರಪ್ಪ: ಎಲ್ಲ ನಾಯಕರು ನೀವು ಏನು ಹೇಳುತ್ತೀರಿ, ಅದರಂತೆ ಕೇಳುತ್ತೇವೆ. ಮುಖ್ಯಮಂತ್ರಿ, Parlimentary Affairs Minister ರವರು ಬರಲಿ.

ಶ್ರೀ ಎನ್. ಧರ್ಮಸಿಂಗ್: ಅವರು ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಏಕೆ?

ಶ್ರೀ ಎನ್. ಧರ್ಮಸಿಂಗ್: ಏನೋ ನಿನ್ನೆ ಉತ್ತರ ಕೊಡುವುದಕ್ಕೆ ಬಂದರು. ಯಾವಾಗ ಬಂದಿದ್ದಾರೆ ಹೇಳಿ? ಈಗ ಬರುತ್ತಾರೆಯೇ?

ಅಧ್ಯಕ್ಷರು: ಈಗ business ತೆಗೆದುಕೊಳ್ಳೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ಹೇಳಿದ ವಿಷಯ ಒಂದಿದೆ.

ಅಧ್ಯಕ್ಷರು: ಯೋಗೀಶ್ ಭಟ್.....

ಶ್ರೀ ಜೆ.ಸಿ.ಮಾಧುಸ್ವಾಮಿ: SEZ ಬಗ್ಗೆ ಚರ್ಚೆಯಾದ ಮೇಲೆ ನನ್ನನ್ನು ಕರೆಯುತ್ತೇನೆಂದು ತಾವು ಹೇಳಿದ್ದಿರಿ. Adjourment motion ಕೊಟ್ಟಿದ್ದರ ಮೇಲೆ ನನ್ನನ್ನು ಚರ್ಚೆಗೆ ಕರೆಯುತ್ತೇನೆಂದು ಹೇಳಿದ್ದೀರಿ.

ವರದಿಯನ್ನೊಪ್ಪಿಸುವುದು

ಶ್ರೀ ಎನ್.ಯೋಗೀಶ್ ಭಟ್(ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ): ಮಾನ್ಯ ಅಧ್ಯಕ್ಷರೆ, 2006-07ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 35 ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶಾಸನ ರಚನೆ

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಹೇಳಿದ್ದೀರಿ.